ನಿಲ್ಲಿಸುದ್ದೇವೆ. ಏಪ್ರಿಲ್ 15ನೇ ತಾರೀಖಿನಿಂದ ಪುನಃ ಇದನ್ನು ಪ್ರಾರಂಭ ಮಾಡುತ್ತಿದ್ದೇವೆ. ಇದನ್ನು ಯಾವ ಕಾರಣಕ್ಕೋಸ್ಕರ ಮುಚ್ಚಿದ್ದೇವೆ ಎಂದರೆ, ಆಗ ಉಪಯೋಗಿಸುವಂತಹ ಕಂಪ್ಯೂಟರ್ ಸಾಫ್ಟ್‌ವೇರ್ ಏನಿತ್ತು ಅದು ಈಗ ಬಹಳ ಹಳೆಯದಾಗಿದೆ, ಆದಕಾರಣ ಅದನ್ನು ಹೊಸದಾಗಿ ಮಾಡಬೇಕಾಗಿದೆ, ಮತ್ತು ಈ ಜಾಲವನ್ನು ಇಡೀ ಬೆಂಗಳೂರು ಅಷ್ಟೇ ಅಲ್ಲ, ಹುಬ್ಬಳ್ಳಿಯಲ್ಲಿ, ಮೈಸೂರಿನಲ್ಲಿ ಮತ್ತು ಇತರೇ ಕಡೆಗಳಲ್ಲಿಯೂ ಸಹಿತ ಕಂಪ್ಯೂಟರ್ ಮೂಲಕವಾಗಿ ರಿಸರ್ವೇಷನ್ ಮಾಡಬೇಕು ಎನ್ನುವ ಉದ್ದೇಶದಿಂದಾಗಿ ನಮ್ಮ ಡಿಪೋಗಳಿಗೆ, ಡಿವಿಷನ್‌ಗಳಿಗೆ ಮತ್ತು ರಿಸರ್ವೇಷನ್ ಕೌಂಟರ್‌ಗಳಿಗೆ ಸ್ಯಾಟಲೈಟ್ ಮೂಲಕ ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ಮುಚ್ಚಿದ್ದೇವೆಯೇ ವಿನಃ ಬೇರೆ ಯಾವ ಕಾರಣದಿಂದಲೂ ಅಲ್ಲ. ನಾವು ಪುನಃ ಇದನ್ನು ಏಪ್ರಿಲ್ 15 ರಿಂದ ಪ್ರಾರಂಭ ಮಾಡುತ್ತೇವೆ.

ಕುಣಿಗಲ್ ಪಟ್ಟಣದ ಕೊಳಚೆ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳು

135 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಪಟ್ಟಣದಲ್ಲಿ ಗುರುತಿಸಿರುವ ಕೊಳಚೆ ಪ್ರದೇಶಗಳೆಷ್ಟು?

ಆ) ಈ ಪ್ರದೇಶಗಳ ಅಭಿವೃದ್ಧಿಗಾಗಿ, ವಸತಿ ಸೌಕರ್ಯವೂ ಸೇರಿದಂತೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಮಂಡಳಿಯು ಕುಣಿಗಲ್ ಪಟ್ಟಣದಲ್ಲಿ ಇದುವರೆಗೂ 7 ಕೊಳಚೆ ಪ್ರದೇಶಗಳನ್ನು ಗುರುತಿಸಿದೆ.

ಆ) ಕುಣಿಗಲ್ ಪಟ್ಟಣದಲ್ಲಿ ಗುರುತಿಸಿರುವ 7 ಕೊಳಚೆ ಪ್ರದೇಶಗಳ ಪೈಕಿ 4 ಕೊಳಚೆ ಪ್ರದೇಶಗಳು ಕಾಯಿದೆ ಪ್ರಕಾರ ಘೋಷಿತವಾಗಿದ್ದು, 3 ಕೊಳಚೆ ಪ್ರದೇಶಗಳಲ್ಲಿ ಈಗಾಗಲೇ 9.24 ಲಕ್ಷ ರೂ.ಗಳಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗಿದೆ. ಆದರೆ ವಸತಿ ಯೋಜನೆಯನ್ನು ಇಲ್ಲಿ ತೆಗೆದುಕೊಂಡಿರುವುದಿಲ್ಲ.

(ಲಕ್ಷ ರೂ.ಗಳಲ್ಲಿ)

ಕ್ರ.ಸಂ	ಕೊಳಚೆ ಪ್ರದೇಶದ ಹೆಸರು	ಖರ್ಚಾದ ಹಣ	ಒದಗಿಸಿರುವ ಸೌಲಭ್ಯಗಳ ವಿವರ
1)	ಕೋಟೆ ಏರಿಯಾ ಕೊಳಚೆ ಪ್ರದೇಶ	1.61	ರಸ್ತೆ, ಚರಂಡಿ, ನೆಲಹಾಸು ಮತ್ತು ಬೀದಿ ದೀಪ
	ಇದೇ ಕೊಳಚೆ ಪ್ರದೇಶಕ್ಕೆ ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ	4.85	ಕಲ್ಲು ಚಪ್ಪಡಿ, ರಸ್ತೆ ಮಳೆನೀರಿನ ಚರಂಡಿ, ಕಿರುನೀರು ಸರಬರಾಜು

1	2	3	4
2)	ಗುಜ್ಜಾರಿ ಮೊಹಲ್ಲಾ ಕೊಳಚೆ ಪ್ರದೇಶ	1.89	ರಸ್ತೆ, ಚರಂಡಿ, ಬೀದಿ ದೀಪ ಕೊಳವೆ ಬಾವಿ
3)	ಸಿದ್ದಾರ್ಥ ಹೈಸ್ಕೂಲ್ ಹಿಂಭಾಗ	0.89	ಯು ಆಕಾರದ ಚರಂಡಿ ಮತ್ತು ರಸ್ತೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಕುಣಿಗಲ್ ಪಟ್ಟಣದಲ್ಲಿ ಒಟ್ಟು 7 ಕೊಳಚೆ ಪ್ರದೇಶಗಳು ಇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಇಲ್ಲಿ ತೆಗೆದುಕೊಂಡಿರುವುದು ಇದುವರೆವಿಗೆ ಮೂರು ಪ್ರದೇಶಗಳು ಮಾತ್ರ. ಇದಕ್ಕಾಗಿ ಖರ್ಚಾಗಿರುವ ಹಣ ಎಷ್ಟು ಎಂದರೆ 9.24 ಲಕ್ಷ ರೂಪಾಯಿಗಳು ಮಾತ್ರ. ಆದರೆ ಇನ್ನು ಉಳಿದಿರುವಂತಹ 4 ಕೊಳಚೆ ಪ್ರದೇಶಗಳನ್ನು ನೀವು ಅಭಿವೃದ್ಧಿ ಮಾಡುವುದಕ್ಕೆ ಏನಾದರು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವಿರಾ? ಎರಡನೆಯದಾಗಿ ನನ್ನ ಮೂಲ ಉದ್ದೇಶ ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ವಸತಿ ಸೌಕರ್ಯವೂ ಸೇರಿದಂತೆ, ಕರ್ನಾಟಕ ಕೊಳಚೆ ನಿರ್ಮೂಲನ ಅಭಿವೃದ್ಧಿ ಮಂಡಳಿ ಕೈಗೊಂಡಿರುವ ಕ್ರಮಗಳೇನು ಎಂದು ಕೇಳಿದ್ದಕ್ಕೆ, ಇಲ್ಲಿ ವಸತಿ ಯೋಜನೆಯನ್ನು ತೆಗೆದುಕೊಂಡಿರುವುದಿಲ್ಲ ಎಂದು ಬಹಳ ಕರ್ಕಶವಾಗಿ ಉತ್ತರ ಕೊಟ್ಟಿದ್ದಾರೆ. ಆದರೆ ನನ್ನ ಸಲಹೆ ಏನೆಂದರೆ, ಈ ಕೊಳಚೆ ಪ್ರದೇಶವನ್ನು ನಿರ್ಮೂಲನ ಮಾಡುವುದಕ್ಕೆ ವಸತಿ ಯೋಜನೆಯನ್ನು ಕೈಗೊಳ್ಳಬೇಕು ಎಂದು. ಮಾನ್ಯ ಸಚಿವರು ಕುಣಿಗಲ್ ಪಟ್ಟಣಕ್ಕೆ ಬಂದಾಗ ಕೆಲವು ಮನೆಗಳನ್ನು ಕೊಳಚೆ ನಿರ್ಮೂಲನ ಮಂಡಳಿಗೆ ಕೊಡುತ್ತೇವೆ ಎಂದು ಹೇಳಿದ್ದರು. ಆದುದರಿಂದ ಈ ಯೋಜನೆಯಲ್ಲಿ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ತಾವೇನಾದರೂ ಮನೆಗಳನ್ನು ಕೊಡುತ್ತಿರುವಿರಾ ಮತ್ತು ಉಳಿದಂತಹ ಪ್ರದೇಶಗಳು ಅಭಿವೃದ್ಧಿ ಪಡಿಸುವುದಕ್ಕೆ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುವಿರಿ?

ಶ್ರೀ ಹೆಚ್.ಡಿ. ರೇವಣ್ಣ : ಈಗ ಸಧ್ಯಕ್ಕೆ 7 ಕೊಳಚೆ ಪ್ರದೇಶಗಳಳು ಇವೆ, ಅದರಲ್ಲಿ ಈಗ4 ಕೊಳಚೆ ಪ್ರದೇಶಗಳನ್ನು ಕೈಗೊತ್ತಿಕೊಂಡಿದ್ದೇವೆ. ಇದಕ್ಕಾಗಿ ಇಟ್ಟಿದ್ದಂತಹ ಹಣ ಸುಮಾರು 6 ಲಕ್ಷದ 75 ಸಾವಿರ ರೂ. ಇದರಲ್ಲಿ ಸುಮಾರು 4 ಲಕ್ಷದ 75 ಸಾವಿರ ರೂಪಾಯಿಗಳನ್ನು ನಾವು ಈ ವರ್ಷ ಖರ್ಚು ಮಾಡಿದ್ದೇವೆ. ಇನ್ನು ಬಾಕಿ ಉಳಿದಿರುವಂತಹ ಹಣವನ್ನು ಈ ವರ್ಷ ಕೆಲಸ ಮಾಡುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನ ಮಾಡುತ್ತೇವೆ. ಅದರ ಜೊತೆಗೆ ಸ್ಲಮ್‌ನಲ್ಲಿ ಹೊಸದಾಗಿ ಮನೆಗಳನ್ನು ತೆಗೆದುಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಏನು ಯೋಚನೆ ಮಾಡಿದ್ದಾರೆ, ಅದನ್ನು ಹುಡ್ಕೋ ನೆರವಿನೊಂದಿಗೆ ಕಳುಹಿಸಿಕೊಟ್ಟರೆ, ಸಾಧ್ಯವಾದಷ್ಟು ಬೇಗ ಅಂದರೆ, ಈ ವರ್ಷ ಒಂದು ನೂರು ಮನೆಗಳನ್ನು ಮಾಡಿಸುತ್ತೇವೆ ಎಂದು ಹೇಳಿದ್ದೆವು, ಅದನ್ನು ಮಾಡಿಸಿ ಕೊಡಲು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇನೆ.